ಏನಾಗುತ್ತದೋ ಅದು ಮನುಷ್ಯರು ಕಟ್ಟುವ ಪಕ್ಷಗಳಿಗೂ ಆಗುತ್ತಿರುತ್ತದೆ ಎಂದಷ್ಟೇ ಇದರ ಅರ್ಥ! 1957ರ ಸಾರ್ವತ್ರಿಕ ಚುನಾವಣೆಯ ಸೋಲಿನ ನಂತರ ಸಮಾಜವಾದಿ ಪಕ್ಷ ಹಾಗೂ ಪ್ರಜಾ ಸಮಾಜವಾದಿ ಪಕ್ಷಗಳ ನಾಯಕರಿಗೂ ಸಣ್ಣ ಜ್ಞಾನೋದಯವಾಯಿತು.

ಲೋಹಿಯಾರ ತಾತ್ವಿಕ ನಿಲುವು ಸ್ಪಷ್ಟವಾಗಿತ್ತು: 'ಎರಡೂ ಪಕ್ಷಗಳು ಒಗ್ಗೂಡಲಿ. ಆದರೆ ಸಮಾಜವಾದಿ ಪಕ್ಷದ ಸಂವಿಧಾನ, ಪಾಲಿಸಿಗಳು ಹಾಗೂ ಕಾರ್ಯಕ್ರಮಗಳ ಆಧಾರದ ಮೇಲೆ ಈ ವಿಲೀನ ಆಗಬೇಕು.'

ಎರಡೂ ಪಕ್ಷಗಳ ಕಾರ್ಯಕರ್ತರು ವಿಲೀನವನ್ನು ಬಯಸಿದ್ದರೂ, ಪ್ರಜಾಸಮಾಜವಾದಿ ಪಕ್ಷದ ಅಶೋಕ ಮೆಹ್ತಾ ಥರದವರಿಗೆ ವಿಲೀನ ಇಷ್ಟವಿರಲಿಲ್ಲ. 1955ರಲ್ಲಿ ಕಾಂಗ್ರೆಸ್ ಪಕ್ಷ 'ಸಮಾಜವಾದಿ ಮಾದರಿ ಸಮಾಜ' ಕುರಿತ ನಿರ್ಣಯವನ್ನು ಅಳವಡಿಸಿಕೊಂಡಾಗ, ಅಶೋಕ ಮೆಹ್ತಾ, 'ಕಾಂಗ್ರೆಸ್ ಪಕ್ಷ ಸಮಾಜವಾದವನ್ನು ಅಳವಡಿಸಿಕೊಂಡಿದೆ; ಸಮಾಜವಾದಿ ಪಕ್ಷದ ಅಗತ್ಯವೇ ಇಲ್ಲ' ಎಂದಿದ್ದರು!

ಇವೆಲ್ಲ ಕಂಡಿದ್ದ ಲೋಹಿಯಾ ರಮಾಗೆ ಬರೆದರು:

'ಜೆ.ಪಿ. ಈ ಮಾತುಕತೆಯನ್ನು ಯಾಕೆ ಶುರು ಮಾಡಿದರೋ ಕಾಣೆ. ಭಾರತದ ರಾಜಕೀಯ ತಳಹದಿಯೇ ಇಲ್ಲದ ರಾಜಕೀಯವಾಗಿಬಿಟ್ಟಿದೆ. ಇಂಥ ಕಾಲದಲ್ಲಿ ಒಂದು ಸರಿಯಾದ ತಳಹದಿಯಿರುವ ಪಕ್ಷ ಸಾಕಷ್ಟು ಕೆಲಸ ಮಾಡಬಹುದು; ಆದರೆ ಆ ತಳಹದಿ ಭದ್ರವಾಗಿರಬೇಕು.'

ಗೊಂದಲಗಳು ಹೆಚ್ಚತೊಡಗಿದಂತೆ, ಜೆ.ಪಿ. ವಿಲೀನದ ಮಾತುಕತೆಯನ್ನು ಕೈಬಿಟ್ಟರು. ಅಶೋಕ ಮೆಹ್ತಾ, 'ಲೋಹಿಯಾರ ಕಠಿಣವಾದ ಜಗ್ಗಾಟವೇ ಈ ಒಗ್ಗೂಡುವಿಕೆ ನಡೆಯದಿರಲು ಕಾರಣ' ಎಂದು ಹೇಳಿಕೆ ಕೊಟ್ಟರು. ಕೆಲವರು 'ಲೋಹಿಯಾರದು ಸರ್ವಾಧಿಕಾರಿ ಧೋರಣೆ' ಎಂದು ಟೀಕಿಸಿದರು. ಇನ್ನು ಕೆಲವು ನಾಯಕರು, 'ವಿಲೀನಕ್ಕೆ ತತ್ವಗಳ ಅಡ್ಡಿಯೇನೂ ಇಲ್ಲ. ಲೋಹಿಯಾ ಒಬ್ಬರೇ ಈ ಏಕತೆಯ ಪ್ರಯತ್ನಕ್ಕೆ ಅಡ್ಡಿ' ಎಂದರು.

ಲೋಹಿಯಾ ಹೇಳಿದರು: 'ವಿಲೀನಕ್ಕೆ ನಾನು ಅಡ್ಡಿ ಎನ್ನುವವರಿಗೆ ಸಮಾಧಾನ ಆಗುವುದಾದರೆ, ನಾನು ಸಮಾಜವಾದಿ ಪಕ್ಷವನ್ನಷ್ಟೇ ಅಲ್ಲ, ರಾಜಕೀಯವನ್ನೇ ಬಿಟ್ಟು ಹೊರಡುತ್ತೇನೆ'.

ಆಗ ಇಂಗ್ಲಿಷ್ ಪತ್ರಿಕೆಯೊಂದು ಲೋಹಿಯಾ 'ಸುಪ್ರೀಂ ಸ್ಯಾಕ್ರಿಫೈಸ್' ಮಾಡಲಿದ್ದಾರೆ ಎಂದು ವರದಿ ಮಾಡಿತು. ರಮಾ ಮಿತ್ರ ಈ ವರದಿ ಓದಿ ಲೋಹಿಯಾರನ್ನು ಟೀಕಿಸಿ ಪತ್ರ ಬರೆದರು. ಈ ಪತ್ರಕ್ಕೆ ಲೋಹಿಯಾ ಬರೆದ ಉತ್ತರ:

'ಈ ಹಿಂದೆ ಕೂಡ ದಿನ ಬೆಳಗಾಗೆದ್ದು ಓದುವ ಒಂದು ಪತ್ರಿಕೆಗೆ ನಿನ್ನ ಮನಸ್ಸು ಬಲಿಯಾಗಿತ್ತು... ಪತ್ರಿಕಾ ವರದಿಗಳನ್ನು ಗಮನವಿಟ್ಟು ಓದಲು ನಿನಗೆ ಹಲವು ಸಲ ಹೇಳಿದ್ದೇನೆ. ಅವರು ವಿಚಾರಗಳನ್ನು ಕತ್ತರಿಸಿ ಪ್ರಕಟಿಸಿದ್ದರೆ ಅದು ನಮ್ಮ ತಪ್ಪಲ್ಲ.

...ನನ್ನ ಹೇಳಿಕೆಯಲ್ಲಿ 'ಸುಪ್ರೀಂ ಸ್ಯಾಕ್ರಿಫೈಸ್' (ಪರಮೋಚ್ಚ ತ್ಯಾಗ) ಎಂಬ ಪದವೇ ಇಲ್ಲ. ನಿನ್ನ ಅಥವಾ ಯಾವುದೋ ಪತ್ರಿಕೆಯ ಅಸ್ಪಷ್ಟ ಮನಸ್ಸು ಇದನ್ನು ಹೀಗೆ ಊಹಿಸಿಕೊಂಡಂತಿದೆ. ನಾನು ಕಠಿಣ ಪರ್ಯಾಯದ ಬಗ್ಗೆ ಮಾತ್ರ ಹೇಳಿದ್ದೇನೆ. ತಮ್ಮ ತತ್ವಗಳು ಹಾಗೂ ನಮ್ಮ ಸೋಷಲಿಸ್ಟ್ ಪಾರ್ಟಿಯ ತತ್ವಗಳು ಒಂದೇ; ಆದರೆ ನನ್ನ ಪ್ರಜಾಪ್ರಭುತ್ವ ವಿರೋಧಿ ತತ್ವಗಳಿಂದಾಗಿ ನಾನೊಬ್ಬನೇ ಇದಕ್ಕೆ ತಡೆಯಾಗಿದ್ದೇನೆ ಎಂದು ಪ್ರಜಾ ಸೋಷಲಿಸ್ಟರು ರಾಗ ಪಾಡುತ್ತಿದ್ದರು. ಆದ್ದರಿಂದ, 'ಅವರು ನಮ್ಮ ತತ್ವಗಳನ್ನು ಒಪ್ಪಿಕೊಳ್ಳಲಿ, ನಾನು ಪಕ್ಷ ಬಿಟ್ಟು ಹೋಗುತ್ತೇನೆ' ಎಂದು ಅವರಿಗೆ ಹೇಳಿದೆ. ಮತ್ತೆ ತಪ್ಪಾಗಿ ಯೋಚಿಸಬೇಡ: 'ತತ್ವಗಳು' ಎಂದರೆ ತತ್ವಗಳು, ಸಂಘಟನೆ, ಕಾರ್ಯಕ್ರಮ ಎಂದು ಸ್ಪಷ್ಟಪಡಿಸಿದ್ದೇನೆ.'

ಪತ್ರದ ಕೊನೆಗೆ ಲೋಹಿಯಾ ಬರೆಯುತ್ತಾರೆ: 'ನಿನ್ನ ಜೀವನದಲ್ಲಿ ಸದಾ ಒಂದನ್ನು ನೆನಪಿಟ್ಟುಕೋ: ಯಾವನೇ ಆಗಲಿ, ಹಂದಿ ಅಥವಾ ಘೇಂಡಾಮೃಗದ ಹಾಗೆ ನೇರವಾಗಿ ನಡೆಯುತ್ತಿದ್ದರೆ, ಅವನು ಯಾರಿಗೂ ಕೆಡುಕುಂಟು ಮಾಡುವುದಿಲ್ಲ. ಅವನು ಸಾಯಬಹುದು; ಆದರೆ ಸೋಲುವುದಿಲ್ಲ. ಈ ಜೀವನದಲ್ಲಿ, ಕೊನೇ ಪಕ್ಷ ರಾಜಕೀಯದಲ್ಲಾದರೂ, ನಾನು ಹಂದಿ ಅಥವಾ ಘೇಂಡಾಮೃಗದ ಹಾಗೆ ನಡೆಯುತ್ತೇನೆ. ಈ ಕುರಿತು ಸರಿಯಾಗಿ ಯೋಚಿಸದೆ ನೀನು ದಾರಿ ತಪ್ಪಬೇಡ.'

ಹೀಗೆ ಲೋಹಿಯಾ ರಮಾ ಜೊತೆ ಎಲ್ಲವನ್ನೂ ಹೇಳಿಕೊಳ್ಳುತ್ತಿದ್ದರು. 'ಭಾರತದಲ್ಲಿ ಒಂದು ಸೆಲ್ಫ್ ಇನ್ನೊಂದು ಸೆಲ್ಫನ್ನು ಸಂಧಿಸುತ್ತದೆಯೆ?' ಎಂಬ ಪರ್ಲ್ ಎಸ್ ಬಕ್ ಪ್ರಶ್ನೆಗೆ ಒಂದು ಬಗೆಯ ಉತ್ತರ ಲೋಹಿಯಾಗೆ ರಮಾ ಸಂಗದಲ್ಲಿ ಸಿಕ್ಕಿದಂತಿತ್ತು. ರಮಾ ಮಿತ್ರ ಲೋಹಿಯಾರ ನಡೆ ನುಡಿ, ಚಿಂತನೆಗಳ ಸಂಕೀರ್ಣ ಲೋಕವನ್ನು ಅರ್ಥಮಾಡಿಕೊಂಡು ಸ್ಪಂದಿಸುವ, ಪ್ರಶ್ನಿಸುವ, ಒಪ್ಪುವ ಗೆಳತಿಯಾಗಿದ್ದರು. ಲೋಹಿಯಾರ ಅಂತರಂಗದ ಭಾಗವಾಗಿದ್ದರು.

ಗಂಭೀರ ಪ್ರಾಧ್ಯಾಪಕಿಯಾಗಿದ್ದ ರಮಾ ಒಳ್ಳೆಯ ಲೇಖಕಿಯೂ ಆಗಬೇಕೆಂದು ಲೋಹಿಯಾ ಒತ್ತಾಯಿಸುತ್ತಿದ್ದರು. ಭಾರತದ ಚರಿತ್ರೆಯಲ್ಲಿ ಲೋಹಿಯಾ ಬಹುವಾಗಿ ಇಷ್ಟಪಡುತ್ತಿದ್ದ ರಾಣಿಯೆಂದರೆ ದಿಲ್ಲಿಯ ರಜಿಯಾ ಬೇಗಮ್. ಇತಿಹಾಸ ಬೋಧಿಸುವ ರಮಾ ಮಿತ್ರ, ರಜಿಯಾ ಬೇಗಮ್ ಕುರಿತು ಆಳವಾಗಿ ಸಂಶೋಧನೆ ಮಾಡಿ 'ಮ್ಯಾನ್‌ಕೈಂಡ್' ಪತ್ರಿಕೆಗೆ ಬರೆಯಬೇಕೆಂದು ಲೋಹಿಯಾ ಹೇಳಿದ್ದರು. ಆ ಕೆಲಸವನ್ನು ರಮಾಗೆ ನೆನಪಿಸುತ್ತಾರೆ:

'ರಜಿಯಾ ಬೇಗಮ್ ಕುರಿತು ನೀನು ದೀರ್ಘ ಪತ್ರ ಬರೆಯಬೇಕಾಗಿತ್ತು. ಅದು ಸಹಜವಾಗಿಯೇ ಖಾಸಗಿ ಅಂಶಗಳು, ಚರಿತ್ರೆ ಹಾಗೂ ವಾಸ್ತುಶಿಲ್ಪಗಳನ್ನು ಒಂದರೊಡನೊಂದು ಬೆಸೆಯುತ್ತಿತ್ತು. ದೆಹಲಿಯ ಸಿಂಹಾಸನವನ್ನೇರಿದ ಏಕಮಾತ್ರ ಮಹಿಳೆಯ ಬಗ್ಗೆ ಖಾಸಗಿ, ಚಾರಿತ್ರಿಕ, ಕಲೆ ಅಥವಾ ವಾಸ್ತುಶಿಲ್ಪ ಈ ದೃಷ್ಟಿಗಳಿಂದ ನೋಡಿದ ಸುದೀರ್ಘ ಪ್ರಬಂಧವೊಂದನ್ನು ನಾನು ನಿನ್ನಿಂದ ಎದುರು ನೋಡುತ್ತಿದ್ದೇನೆ.'

ಲೇಖನ ಕುರಿತು ಮುಂದಿನ ತಿಂಗಳು ಲೋಹಿಯಾ ಮತ್ತೆ ನೆನಪಿಸುತ್ತಾರೆ:

'ನೀನು ರಜಿಯಾ ಕುರಿತು ಕೆಲಸ ಮಾಡಲು ಶುರು ಮಾಡಬೇಕು. ಇದು ಬೇಗ ಆಗಬೇಕು; ಬರವಣಿಗೆ ಆಸಕ್ತಿ ಕೆರಳಿಸುವಂತೆ ಮುಂದುವರಿಯಬೇಕು. ನೀನೇ ಇಷ್ಟೊಂದು ಸಮಯ ತೆಗೆದುಕೊಂಡರೆ ಇನ್ನು ಬೇರೆಯವರಿಗೆ ಏನು ಹೇಳಬೇಕೋ ತಿಳಿಯದು.'

ಮುಂದಿನ ಪತ್ರದಲ್ಲಿ ಲೋಹಿಯಾ ಕೊಂಚ ಕಟುವಾಗಿಯೇ ಬರೆಯುತ್ತಾರೆ:

'ನೀನೀಗ ಅಗತ್ಯವಾಗಿ ಮಾಡಬೇಕಾಗಿರುವುದು ಕಠಿಣ ಶ್ರಮದ ಕೆಲಸವನ್ನು. ಪ್ರತಿದಿನ ನೀನು ನಿನ್ನ ವಿದ್ಯಾರ್ಥಿನಿಯರಿಗೆ ಎರಡು, ಮೂರು, ನಾಲ್ಕು ಉಪನ್ಯಾಸ ಕೊಡಬೇಕೆಂಬುದು ನನಗೆ ಗೊತ್ತಿದೆ. ಆದರೆ ನಿನಗೆ ಸಾಕಷ್ಟು ಬಿಡುವಿನ ಸಮಯವಿದೆ. ನೀನು ಬೇರೆ ಯಾವುದೇ ಕೆಲಸವನ್ನೂ ಕೈಗೆತ್ತಿಕೊಂಡಿಲ್ಲ; ಹೀಗಾಗಿ ನಿನ್ನನ್ನು ಒಂಟಿತನದ ಭಾವ ಕಾಡುತ್ತಿದೆ. ಅದರ ಪರಿಣಾಮವಾಗಿ ಕೆಲವರ ಸಹವಾಸ ಮಾಡುತ್ತೀಯ; ಅವರಲ್ಲಿ ಕೆಲವರು ಜಗತ್ತಿನ ಅತ್ಯಂತ ಭ್ರಷ್ಟರು...

ಆದ್ದರಿಂದ ನೀನು ರಜಿಯಾ ಸಂಶೋಧನೆಯಂಥ ಯಾವುದಾದರೂ ಸಂಶೋಧನಾ ಯೋಜನೆಯನ್ನು ಕೈಗೆತ್ತಿಕೋ. ಆ ಮೂಲಕ ನಿನ್ನ ಒಂಟಿತನದ ಸಮಯವನ್ನು ತುಂಬಿಕೋ. ಇದು ನನ್ನ ಬುದ್ಧಿವಾದವಲ್ಲ; ಆದೇಶ ಎಂದೇ ತಿಳಿದುಕೋ.'

ಛೇಡಿಸಿಕೊಳ್ಳುತ್ತಲೇ ಕೊನೆಗೆ ರಮಾ ರಜಿಯಾ ಕುರಿತು ಲೇಖನ ಬರೆಯುತ್ತಾರೆ.

'ರಜಿಯಾ ಲೇಖನ ತುಂಬಾ ಚೆನ್ನಾಗಿದೆ. ಏಪ್ರಿಲ್ ಸಂಚಿಕೆಯಲ್ಲಿ ಪ್ರಕಟವಾಗುತ್ತದೆ' ಎಂದು ಬರೆದ ಲೋಹಿಯಾ, ರಮಾ ಹುಡುಕದೆ ಕೈಬಿಟ್ಟ ಚರಿತ್ರೆಯ ಅಂಶಗಳನ್ನು ಹುಡುಕುವಂತೆ ಕೇಳುತ್ತಾರೆ: 'ರಜಿಯಾಳನ್ನು ಪ್ರಜೆಗಳು ತಿರಸ್ಕರಿಸಿದ್ದೇಕೆ? ಸೈನ್ಯ ರಜಿಯಾಳನ್ನು ವಂಚಿಸಿದ್ದಕ್ಕೆ ಏನು ಕಾರಣ?'

ಪ್ರೇರೇಪಣೆ, ಛೇಡಿಕೆ, ಕೋಪ, ಟೀಕೆ, ಚುಡಾವಣೆ... ಎಲ್ಲವೂ ತುಂಬಿದ್ದ ಈ ಸಂಬಂಧದಲ್ಲಿ ಲೇಖಕನೊಬ್ಬ ತನ್ನ ಗೆಳತಿಗೆ ಬರೆವ ಕಲೆ ಕಲಿಸುವ ರೀತಿ; ಗೆಳತಿಯೆಂಬ ಮುಲಾಜು ನೋಡದೆ ನಿಷ್ಠುರವಾಗಿ ವಿಮರ್ಶಿಸುವ ಕ್ರಮ; ಇವೆಲ್ಲದರ ಹಿಂದಿದ್ದ ಶುದ್ಧ ನಿಸ್ವಾರ್ಥ... ಎಲ್ಲವೂ ಅನನ್ಯವಾಗಿವೆ. ಮುಂದೊಮ್ಮೆ 'ಮ್ಯಾನ್‌ಕೈಂಡ್'ಗೆ ಪುಸ್ತಕಗಳನ್ನು ವಿಮರ್ಶಿಸಲು ಸೂಚಿಸುತ್ತಾ ರಮಾಗೆ ಲೋಹಿಯಾ ಮಾಡುವ ಮಾರ್ಗದರ್ಶನ ಎಲ್ಲ ಕಾಲದ ಪುಸ್ತಕ ವಿಮರ್ಶಕ, ವಿಮರ್ಶಕಿಯರಿಗೂ ಮಾರ್ಗದರ್ಶನದಂತಿದೆ:

'ವಿಮರ್ಶೆ ಮಾಡುವಾಗ ನಿನ್ನ ಬುದ್ಧಿಯ ಓಟ ಮುಕ್ತವಾಗಿರಲಿ. ಮೊದಲ ಪ್ಯಾರಾದಲ್ಲಿ ಕೃತಿಯ ಮುಖ್ಯಾಂಶವಿರಲಿ. ಮುಂದಿನ ಅರ್ಧ ಪ್ಯಾರಾದಷ್ಟು ಕೃತಿ ನೀಡುವ ಹೊಸ ವಿಚಾರ ಕುರಿತು ಬರೆ. ನಂತರ ಕೃತಿಯಲ್ಲಿ ಬರುವ ವಿಶೇಷಗಳನ್ನು ಕುರಿತು ಬರೆ. ಕೊನೆಯಲ್ಲಿ ನಿನ್ನ ಸರಿಯಾದ ತೀರ್ಮಾನವಿರಲಿ. ಕೃತಿ ಚೆನ್ನಾಗಿದೆ, ಚೆನ್ನಾಗಿಲ್ಲ ಎಂದು ಅಭಿಪ್ರಾಯ ಕೊಡದೆ, ಕೃತಿಯಲ್ಲಿ ನಿನ್ನನ್ನು ತಟ್ಟಿದ ಯಾವುದೇ